ಬಾಲರ ಪಟ್ಟಣದವರೆಗೆ 200 ಮಿ.ಮೀ. ವ್ಯಾಸದ ಡಿ.ಐ. ಏರು ಕೊಳವೆ ಮಾರ್ಗವನ್ನು ಅಳವಡಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಬಂದಿದೆ.

ಪುರಸಭೆಯಿಂದ ಯೋಜನೆಯನ್ನು ತಯಾರಿಸಲು ಸರ್ವೆಗೆ ತಗಲುವ ಮೊಬಲಗನ್ನು ಮಂಡಲಿಗೆ ಠೇವಣಿಸಿದ ಕೂಡಲೇ ಸರ್ವೆ ಮಾಡಿ ಅಂದಾಜನ್ನು ತಯಾರಿಸಲಾಗುವುದು.

ಹೊಸ ಜಿಲ್ಲೆಗಳಿಗೆ ಕಾರಾಗೃಹ ಅಭಿವೃದ್ಧಿ ನೀಡಿದ ಅನುದಾನ

316(734) - ಶ್ರೀ ಗುರುಸ್ವಾಮಿ, ಸಿ. (ಚಾಮರಾಜನಗರ): ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಜಿಲ್ಲೆಗಳ ಕಾರಾಗೃಹಗಳ ಅಭಿವೃದ್ಧಿಗೆ ನಿಗದಿಗೊಳಿಸಿದ, ಖರ್ಚು ಮಾಡಿದ ಹಣ ಎಷ್ಟು? ಜಿಲ್ಲಾವಾರು ಹಾಗೂ ಕ್ಷೇತ್ರವಾರು ವಿವರ ನೀಡುವುದು.

ಶ್ರೀ ರಾಜ ಅಮರೇಶ್ವರ ನಾಯಕ್ (ಬಂದೀಖಾನೆ ಸಚಿವರು):

ಅ) ಹೊಸ ಜಿಲ್ಲೆಗಳಲ್ಲಿನ ಕಾರಾಗೃಹಗಳ ಅಭಿವೃದ್ಧಿಗೆ ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಆದರೂ ಇಲಾಖೆಗೆ ಒದಗಿಸಿದ ಅನುದಾನದಿಂದ ಕಾರಾಗೃಹಗಳ ಆಡಳಿತವನ್ನು ನಡೆಸಲಾಗುತ್ತಿದೆ.

ರಾಜ್ಯದಲ್ಲಿ ಜಲಸಂಪನ್ಮೂಲ ಜಲಸಂವರ್ಧನಾ ಯೋಜನೆ

317(735) - ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲಸಂಪನ್ಮೂಲ ಜಲಸಂವರ್ಧನಾ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಕಳೆದವರ್ಷ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಕ್ಷೇತ್ರಾವಾರು ವಿವರ ನೀಡುವುದು;

ಆ) ಪ್ರತಿ ಕಾಮಗಾರಿಗೆ ನಿಗಧಿಪಡಿಸಿದ್ದ ಹಣ ಎಷ್ಟು; ಕಾಮಗಾರಿವಾರು ಖರ್ಚಾದ ಹಣದ ವಿವರಗಳನ್ನು ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) 2000-2001 ಮತ್ತು 2001-02ನೇ ಸಾಲಿನಲ್ಲಿ ಜಲಸಂವರ್ಧನೆ ಯೋಜನೆಯಲ್ಲಿ ಯಾವುದೇ ಕಾಮಗಾರಿಗಳನ್ನು ರಾಜ್ಯದಲ್ಲಿ ಹಮ್ಮಿಕೊಂಡಿರುವುದಿಲ್ಲ. ಆದರೆ, ಜಲಸಂವರ್ಧನೆ ಯೋಜನೆಗೆ ವಿಶ್ವಬ್ಯಾಂಕಿನ ಹಣಕಾಸಿನ ನೆರವು ಪಡೆಯುವ ಪ್ರಸ್ತಾವನೆಯನ್ನು ಸಲ್ಲಿಸುವಾಗ ಪೂರಕವಾಗಿ 5 ಜಿಲ್ಲೆಗಳಲ್ಲಿ 15 ಕೆರೆಗಳ ಪ್ರಾಯೋಗಿಕ ಕೆಲಸಕ್ಕಾಗಿ ರೂ. 15.21,510-00 ಗಳನ್ನು ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಉದ್ಭವಿಸುವುದಿಲ್ಲ.